ಶ್ರೀ ಕೆ ಮಾದೇಗೌಡ.—ನೌಕರರ ಸಂಬಳ ಸಾರಿಗೆಗಳಿಗಾಗಿ ಲಜ ಪರ್ಸೆಂಟ್ ಸರ್ಕಾರದಿಂದ ಕೊಡುತ್ತಿಲ್ಲಿವೇ?

ಶ್ರೀ ಎ. ಆರ್. ಬದರೀನಾರಾಯಣ —ಪ್ರೌಢ ಶಾಲೆಗಳ ಉಪಾಧ್ಯಾಯರಿಗೆ ಸಂಬಳವನ್ನು ಪೂರ್ತಿಯಾಗಿ ಸರ್ಕಾರದಿಂದಲೇ ಕೊಡುತ್ತಿದ್ದೇವೆ.

## SANCTION OF LOAN BY S. C. HOUSE BUILDING CO-OPERATIVE SOCIETIES IN TIPTUR TALUK

228. Sri T. M. MANJUNATH (Tiptur).— Will the Minister for Co-operative be pleased to state:—

(a) whether there are any Scheduled Caste House Building Co-operation Societies in Tiptur taluk ;

(b) if so, the number of share holders who have applied for loan from these Societies ;

(c) the amount of loan paid so far and the number of persons for whom loans have been granted ?

Sri A. SHANKARA ALVA (Minister for Co-operation).—

(a) Yes. There is only one Scheduled Caste and Scheduled Tribe House Building Co-operative Society in Tiptur taluk.

(b) 368.

(c) (i) Rs. 21,490.
(ii) 28 members.

ಈ ಪ್ರಶ್ನೆಗೆ (ಇ) ಗೆ ಕೊಟ್ಟಿರುವ ಉತ್ತರದಲ್ಲಿ ೨೧೯೦ ರೂಪಾಯಿಗಳು ಎಂದು ಇರುವದನ್ನು ೨೧೪೯೦ ರೂಪಾಯಿಗಳು ಎಂದು ತಿದ್ದುಪಡಿ ಮಾಡಿಕೊಳ್ಳಬೇಕು.

† ಶ್ರೀ ಟಿ. ಎಂ. ಮಂಜುನಾಥ.— ಸ್ವಾಮಿ ಈ ತಿಪಟೂರು ತಾಲ್ಲೂಕಿನಲ್ಲಿರುವ ತಪ್ಪಲು ಹರಿಜನ ಗಿರಿಜನರ ಗೃಹನಿರ್ಮಾಣ ಸಂಘಕ್ಕೆ ಇದುವರೆಗೆ ೨೧೪೯೦ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಈಗ ಈ ಹಣವನ್ನು ಅರ್ಜಿಹಾಕಿಕೊಂಡ ಷೇರ್ ಹೋಲ್ಡರುಗಳಿಗೆ ಮನೆಗಳನ್ನು ಕಟ್ಟುವದಕ್ಕಾಗಿ ಮೊದಲನೆ ಕಂತನ್ನು ಕೊಟ್ಟಿದ್ದಾರೆ ಎಂದು ಕಾಣುತ್ತದೆ. ಅವರಿಗೆ ೨ನೇ ಕಂತನ್ನು ಕೊಡದೇ ಇರುವದಕ್ಕೆ ಕಾರಣವೇನು ? ಈಗ ಫಸ್ಟ್ ಇನ್‌ಸ್ಟಾಲ್‌ಮೆಂಟ್ ತೆಗೆದುಕೊಂಡಿರುವವರು ಮನೆಗಳನ್ನು ಕಟ್ಟಿ ಎಷ್ಟು ವರ್ಷ ಆಯಿತು? ಅವರ ಗತಿ ಏನು?

ಶ್ರೀ ಎ. ಶಂಕರ ಆಳ್ವ.— ಸೆಕೆಂಡ್ ಇನ್‌ಸ್ಟಾಲ್‌ಮೆಂಟಿನಲ್ಲಿ ೧೨ ಸಾವಿರ ರೂಪಾಯಿಗಳನ್ನು ಈ ಸೊಸೈಟಿಗೆ ೧೫--೭--೧೯೬೬ರಲ್ಲಿ ರಿಲೀಜ್ ಮಾಡಿಸಿ ತುಮಕೂರು ಡಿ.ಸಿ.ಸಿ. ಬ್ಯಾಂಕಿನಲ್ಲಿ ಇಟ್ಟಿದ್ದಾರೆ. ಈಗ ಸಹಕಾರ ಸಂಘದ ಸದಸ್ಯರಿಗೆ ಪೇಮೆಂಟ್ ಮಾಡುವದನ್ನು ಕ್ಯಾನ್ಸಲ್ ಮಾಡಿದ್ದಾರೆ. ಆ ಸಹಕಾರ ಸಂಘದಲ್ಲಿ ಸೆಕ್ರೆಟರಿ ಆಗಿದ್ದ ಶ್ರೀ ಲಕ್ಕಯ್ಯ ಎನ್ನುವವರ ಮೇಲೆ ಹಣದ ದುರುಪಯೋಗದ ಆಪಾದನೆ ಬಂದು ಅವರನ್ನು ತೆಗೆದು ಹಾಕಿದ ನಂತರ ಅವರು ಸರಕಾರಕ್ಕೆ ಅಪೀಲು ಹೋಗಿ ಅವರು ಸ್ಟೇ ತಂದರು ಅವರು ಆ ಸಹಕಾರ ಸಂಘದ ಅಧಿಕಾರವನ್ನು ಅಡ್ಮಿನಿಸ್ಟ್ರೇಟರಿಗೆ ಬಿಟ್ಟುಕೊಡಲಿಲ್ಲ. ಸ್ಟೇ ವೆಕೇಟ್ ಆದನಂತರ ಅಡ್ಮಿನಿಸ್ಟ್ರೇಟರು ಆ ಸಹಕಾರ ಸಂಘವನ್ನು ವಹಿಸಿಕೊಂಡಮೇಲೆ ಆ ಎಸ್.ಪಿ. ಆ್ಯಂಡ್ ಎನ್.ಟಿ. ಸಹಕಾರ ಸಂಘಕ್ಕೆ ಹಣ ಕೊಡಬೇಕೆಂದು ಮತ್ತೆ ಸ್ಟೇಟ್ ಹೌಸಿಂಗ್ ಬೋರ್ಡಿಗೆ ಪತ್ರ ಬರೆದಿದ್ದರು. ಆದರೆ ಹೌಸಿಂಗ್ ಬೋರ್ಡಿನವರು ಹೆಚ್ಚು ಹಣವನ್ನು ಕೊಡುವದಕ್ಕಾಗುವದಿಲ್ಲ, ಸಾಲ ಕೂಡ ಸಿಕ್ಕುವದಿಲ್ಲ ಎಂದು ಬರೆದಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ.— ಈಗ ಆ ಸಹಕಾರ ಸಂಘದಲ್ಲಿ ಸಾಲವನ್ನು ತೆಗೆದುಕೊಂಡವರು ಗೋಡೆಯನ್ನು ಕಟ್ಟಿ ಹಾಗೆಯೇ ನಿಲ್ಲಿಸಿದ್ದಾರೆ. ಆದ್ದರಿಂದ ಅವರಿಗೆ ಹಿಂದೆ ಸಾಲ ಕೊಟ್ಟಿರುವದನ್ನು ಮಾಫೀ ಮಾಡುತ್ತೀರಾ? ಈಗ ಆ ಸಹಕಾರ ಸಂಘದಲ್ಲಿ ಸಾಲವನ್ನು ಪಡೆಯಲು ೩೬೮ ಜನಗಳು ಅರ್ಜಿಯನ್ನು ಹಾಕಿದ್ದಾರೆ ಜನತಾ ವಸತಿ ಗೃಹನಿರ್ಮಾಣ ಯೋಜನೆಯಲ್ಲಿ ಹರಿಜನ ಗಿರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಸಾಲವನ್ನು ಕೊಡುತ್ತಿಲ್ಲ. ಆದ್ದರಿಂದ ಈಗ ಆ ಸಹಕಾರ ಸಂಘಕ್ಕೆ ಮನೆ ಕಟ್ಟಿಕೊಳ್ಳಲು ಸಾಲಕ್ಕಾಗಿ ಅರ್ಜಿ ಹಾಕಿಕೊಂಡಿರುವ ಹರಿಜನರಿಗೆ ಮನೆ ಕಟ್ಟಿಕೊಳ್ಳಲು ಯಾವ ರೀತಿ ಸಹಾಯ ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ —ಅಡ್ಮಿನಿಸ್ಟ್ರೇಟರು ಆ ಸಹಕಾರ ಸಂಘಕ್ಕೆ ಬಂದ ನಂತರ ೩೬೮ ಮನೆಗಳಿಗೆ ೧೮ ಲಂ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಸ್ಟೇಟ್ ಹೌಸಿಂಗ್‌ಬೋರ್ಡಿಗೆ ಒಂದು ಪತ್ರವನ್ನು ಕಳುಹಿಸಿದ್ದರು. ಈಗ ಸ್ಟೇಟ್ ಹೌಸಿಂಗ್ ಬೋರ್ಡಿನವರು ೨೨,೬೨೨ ಮನೆಗಳಿಗೆ ೪.೭೮ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಇದರಲ್ಲಿ ಅಮೌಂಟ್ ರಿಲೀ ಆಗರುವದು ೪.೧೬ ಕೋಟಿ ರೂಪಾಯಿಗಳು. ಈಗ ಇರತಕ್ಕ ಡಿಮ್ಯಾಂಡ್ ಅನ್ನು ಪೂರೈಸುವದಕ್ಕೆ ಮತ್ತೆ ಎಲ್.ಐ.ಸಿ.ಗೆ ಸಾಲಕ್ಕಾಗಿ ಬರೆದಿದೆ. ಅವರಿನ್ನೂ ಸಾಲ ಕೊಟ್ಟಿಲ್ಲ. ಆದ್ದರಿಂದ ಅದನ್ನು ಯಾವರೀತಿ ವಿಲೇವಾರಿ ಮಾಡಬೇಕು ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇವೆ.